ಓ.ಎಸ್ ನಂಃ *1249* /2021

ಪಿ .ಡಬ್ಲು-1

ಸಾಕ್ಷಿಯನ್ನು ದಿನಾಂಕಃ 29.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಅರೋಪಿ ಪರ ಶ್ರೀ. ಡಿ ವಿ ಎಂ ವಕೀಲರಿಂದ**

ಅರೋಪಿ ಹೇಗೆ ಗೊತ್ತು ಎಂದರೆ ಅವರು ನನ್ನ ಚಿಕ್ಕಮ್ಮ ವಿಜಯಲಕ್ಷ್ಮೀ ಮೂಲಕ ಪರಿಚಯ. ಅರೋಪಿಯು ನನಗೆ ಸುಮಾರು 4 ರಿಂದ 5 ವರುಷಗಳಿಂದ ಪರಿಚಯ. ನಾನು ಸೀರೆ ಅಂಗಡಿ ಇಟ್ಟುಕೊಂಡಿದ್ದೇನೆ. ನನ್ನ ಅಂಗಡಿ ಮುತ್ಯಾಲಪೇಟೆಯಲ್ಲಿ ಇರುತ್ತದೆ. ಸದರಿ ಅಗಂಡಿಯನ್ನು ನೀವೇ ತೆರೆದಿರುತ್ತೀರಾ ಅಥವಾ ನಿಮ್ಮ ಚಿಕ್ಕಮ್ಮ ತೆರೆದಿರುತ್ತಾರಾ ಎಂದರೆ ನಾನೇ ಅವರ ಅಂಗಡಿಯ ಮುಂದೆ ತೆರೆದಿರುತ್ತೇನೆ.

ಅರೋಪಿಯು ನನ್ನ ಬಳಿ ಜನವರಿ 2021 ರಲ್ಲಿ ಹಣ ಕೇಳಿರುತ್ತಾರೆ. ಎಲ್ಲಿ ಹಣ ಕೇಳಿರುತ್ತಾರೆ ಎಂದರೆ ನನ್ನ ಚಿಕ್ಕಮ್ಮನವರ ಬಳಿ ಮೊದಲು ಹಣ ಕೇಳಿರುತ್ತಾರೆ. ನನ್ನ ಚಿಕ್ಕಮ್ಮನವರ ಬಳಿ ಹಣ ಇಲ್ಲದ ಕಾರಣ ನನ್ನ ಬಳಿ ಹಣ ಕೊಡುವಂತೆ ಕೊಡಿಸಿರುತ್ತಾರೆ. ನನ್ನ ಚಿಕ್ಕಮ್ಮ ಯಾವ ದಿನಾಂಕದಂದು ಅರೋಪಿಗೆ ಹಣ ನೀಡುವಂತೆ ಹೇಳಿರುತ್ತಾರೆ ಎಂದರೆ ಜನವರಿ 2021 ರಲ್ಲಿ ಕೇಳಿದ್ದು ದಿನಾಂಕ ಹಾಗೂ ವಾರ ಹೇಳಲಾಗುವುದಿಲ್ಲ.

ದಿನಾಂಕ 25 ಅಥವಾ 26 ಜನವರಿ 2021 ರಲ್ಲಿ ಅರೋಪಿಗೆ ಹಣವನ್ನು ನಮ್ಮ ಅಂಗಡಿಯಲ್ಲಿ ನೀಡಿರುತ್ತೇನೆ. ಹಣವನ್ನು ನೀಡುವಾಗಿ ನಾನು ಅಗಂಡಿಯಲ್ಲಿ ಇದ್ದು ಅ ಸಮಯದಲ್ಲಿ ಅರೋಪಿ ಹಾಗೂ ಅಕೆಯ ಅಣ್ಣ ಬಂದಿದ್ದರು. ಸದರಿ ಹಣ ನನಗೆ ವ್ಯಾಪಾರದಿಂದ ಬಂದಿರುತ್ತದೆ. ಆ ದಿನ ನಾನು ಬ್ಯಾಂಕಿನಿಂದ ಹಣವನ್ನು ಡ್ರಾ ಮಾಡಿರುವುದಿಲ್ಲ. ನಿಮ್ಮ ಅಗಂಡಿಯಲ್ಲಿ ದಿನಕ್ಕೆ ಎಷ್ಟು ವ್ಯಾಪಾರ ಅಗುತ್ತದೆ ಎಂದರೆ 10 ಸಾವಿರ ಅಗುತ್ತದೆ. ಹಣವನ್ನು ನೀಡಿದ ದಿನವೇ ಅರೋಪಿಯಿಂದ ನಿಪಿ 1 ಚೆಕ್ ನ್ನು ಪಡೆದುಕೊಂಡಿರುತ್ತೀರಾ ಎಂದರೆ ಹೌದು. ಹಣವನ್ನು ನೀಡುವಾಗ ಮದ್ಯಾಹ್ನ ಸುಮಾರು 3 ಗಂಟೆಯಾಗಿರುತ್ತದೆ. ಯಾುವ ಮುಖಬೆಲೆಯ ನೋಟುಳನುನ ನೀಡಿರುತ್ತೀರಾ ಎಂದರೆ 500 ಮುಖಬೆಲೆಯ 4 ಬಂಡಲ್ ನೀಡಿರುತ್ತೇನೆ. ನಿಪಿ 1 ರಲ್ಲಿ ಹಣ ಹಾಗೂ ದಿನಾಂಕವನ್ನು ಯಾರು ಬರೆದಿರುತ್ತಾರೆ ಎಂದರೆ ಅರೋಪಿಯೇ ಬರೆದು ನೀಡಿರುತ್ತಾರೆ.

ನಿಪಿ 1 ನ್ನು ನೀಡುವಾಗ ಹಿಂದಿನ ದಿನಾಂಕ ಅಥವಾ ಮುಂದಿನ ದಿನಾಂಕ ನಮೂದಿಸಿರುತ್ತಾರಾ ಎಂದರೆ ದಿನಾಂಕ 25.03.2021 ಎಂದು ನಮೂದಿಸಿ ನೀಡಿರುತ್ತಾರೆ. ವಕೀಲರಿಗೆ ಹೇಳುವಾಗ ಹಿಂದಿನ ದಿನಾಂಕ ನಮೂದಿಸಿ ನೀಡಿರುತ್ತಾರೆ ಎಂದು ಹೇಳಿರುತ್ತೀರಾ ಎಂದರೆ ಇಲ್ಲ . ಪಿರ್ಯಾದಿಯಲ್ಲಿ ಬರೆದಿರುವ ಹಿಂದಿನ ದಿನಾಂಕ ನಮೂದಿಸಿರುವ ವಿಚಾರ ಸರಿ ಇದೆಯಾ ಎಂದರೆ ಹೌದು.

ನಾನು ಎಂ ಎಸ್ಸಿ ವರೆಗೆ ಓದಿರುತ್ತೇನೆ. ನಿಪಿ 1 ರಲ್ಲಿರುವ ಶ್ರೀಲೇಖಾ ಹಾಗೂ 2 ಲಕ್ಷ ಎಂದು ಬರೆದಿರುವ ಬರವಣಿಗೆಗಳು ಬೇರೆ ಬೇರೆ ಇವೆ ಎಂದರೆ ಸರಿ ಮುಂದುವರೆದು

2 ಲಕ್ಷವನ್ನು ಮನೆಯಲ್ಲಿಯೇ ಬರೆದುಕೊಂಡು ಬಂದಿದ್ದು ಹೆಸರನ್ನು ಬರೆದು ನೀಡಿರುತ್ತಾರೆ. ನಿಪಿ 1 ರಲ್ಲಿ 1 ಎನ್ನುವುದನ್ನು 2 ಎಂದು ತಿದ್ದಿರುತ್ತೀರಿ ಎಂದರೆ ಸರಿಯಲ್ಲ. ಸದರಿ ತಿದ್ದುಪಡಿಸಿಗೆ ಅರೋಪಿಯ ಸಹಿ ಪಡೆದಿರುತ್ತೀರಾ ಎಂದರೆ ಇಲ್ಲ. ದಿನಾಂಕ 25.03.2021 ರಂದು ನಿಪಿ 1 ನ್ನುಬ್ಯಾಂಕಿಗೆ ನಗಧಿಕರಣಕ್ಕೆ ಹಾಕಿರುತ್ತೀರಾ ಎಂದರೆ ನಂತರ ದಿನಗಳಲ್ಲಿ ಹಾಕಿರುತ್ತೇನೆ. ನಾನು ದಿನಾಂಕ 16.04.2021 ರಲ್ಲಿ ಅರೋಪಿಯು ತಿಳಿಸಿ ನಂತರ ನಗಧಿಕರಣಕ್ಕೆ ಹಾಕಿರುತ್ತೇನೆ.

ನಿಪಿ 1 ನ್ನು ಹಿಂದಿನ ದಿನಾಂಕವನ್ನು ತಿದ್ದಿರುವ ಕಾರಣ ಅದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಚೆಕ್ ದಿನಾಂಕ 17.04.2021 ರಂದು ವಾಪಸ್ಸು ಬಂದಿರುತ್ತದೆ. ನಾನು ವಕೀಲರ ಮೂಲಕ ಅರೋಪಿಗೆ ನೋಟಿಸ್ಸು ನೀಡಿರುತ್ತೇನೆ ದಿನಾಂಕ ಹೇಳಲಾಗುವುದಿಲ್ಲ. ಸದರಿ ನೋಟಿಸ್ಸು ಅರೋಪಿಗೆ ಯಾವ ದಿನಾಂಕ ಜಾರಿಯಾಗಿರುತ್ತದೆ ಎಂದರೆ ಹೇಳಲಾಗಿರುವುದಿಲ್ಲ. ಎಷ್ಟು ದಿನಕ್ಕೆ ಈ ಪಿರ್ಯಾದಿಯನ್ನು ಹಾಕಿರುತ್ತೀರಾ ಎಂದರೆ ದಿನಾಂಕ 26.04.2021 ರಲ್ಲಿ ಹಾಕಿರುತ್ತೇನೆ.

ನಾನು ಅರೋಪಿಗೆ 2 ಲಕ್ಷ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರೋಪಿಯು ನಿಮಗೆ ಹಿಂದಿನ ಅಥವಾ ಮುಂದಿನ ದಿನಾಂಕ ನಮೂದಿಸಿ ಯಾವುದೇ ಚಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರೋಪಿಯು ನನ್ನಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಚಿಕ್ಕಮ್ಮ ವಿಜಯಲಕ್ಷ್ಮೀ ರವರ ತಂದೆಯ ಹೆಸರು ಮುನಿಶ್ವಾಮಿ ಎಂದರೆ ಸರಿ. ಸದರಿ ಮುನಿಶ್ವಾಮಿಗೆ ಶೋಭ , ವಿಜಯಮ್ಮ , ಶ್ರೀನಿವಾಸ ಮತ್ತು ಮುಂಜುನಾಥ ಮಕ್ಕಳು ಎಂದರೆ ಸರಿ . ನಾನು ಶೋಭ ರವರ ಮಗಳು ಎಂದರೆ ಸರಿ . ಮುನಿಶ್ವಾಮಿ ರವರ 4 ನೇ ಮಗ ನನ್ನ ಗಂಡ ಎಂದರೆ ಸರಿ . ನಿಮ್ಮ ಬಳಿ ಅರೋಪಿಯು ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಚಿಕ್ಕಮ್ಮನವರ ಬಳಿ ಅರೋಪಿಯು 5 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ವಿಜಯಲಕ್ಷ್ಮೀ ರವರಿಗೆ ನೀಡಿರುವ ಚೆಕ್ ನಿಪಿ1 ಅಗಿರುತ್ತದೆ ಎಂದರೆ ಸರಿಯಲ್ಲ. ವಿಜಯಲಕ್ಷ್ಮೀ ರವರು ನೀಡಿದ 5 ಲಕ್ಷ ಹಣವನ್ನು ಅರೋಪಿಯು ನನ್ನ ಗಂಡನ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿ . ಸದರಿ 5 ಲಕ್ಷ ಹಣ ಪಡೆದುಕೊಂಡಿದ್ದರೂ ಸಹ ವಿಜಯಲಕ್ಷ್ಮೀ ರವರಿಗೆ ನೀಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡುಸುಳ್ಳು ಪ್ರಕರಣ ಹಾಕಿರುತ್ತೀರಾ ಎಂದರೆ ಸರಿಯಲ್ಲ. ಮುಂದುವರೆದು 5 ಲಕ್ಷ ವ್ಯವಹಾರ ಬೇರೆ 2 ಲಕ್ಷ ವ್ಯವಹಾರ ಬೇರೆ ಅಗಿರುತ್ತದೆ. ಸದರಿ 5 ಲಕ್ಷದ ವ್ಯವಹಾರವನ್ನು ಈ ಪ್ರಕಣದಲ್ಲಿ ಹೇಳಿರುತ್ತೀರಾ ಎಂದರೆ ಇಲ್ಲ. 1 ಲಕ್ಷ ಇರುವುದನ್ನು 2 ಲಕ್ಷ ಎಂದು ತಿದ್ದಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ.

ವಿಜಯಲಕ್ಷ್ಮೀರ ಮತ್ತು ಮಂಜುನಾಥ್ ರವರು ಅರೋಪಿಯ ವಿರುದ್ಧ ಯಾವುದೇ ಪ್ರಕರಣ ದಾಖಲು ಮಾಡಿರುವುದಿಲ್ಲ ಎಂದರೆ ಸರಿ . ಪ್ರಕರಣ ದಾಖಲಿಸಲು ವಿಳಂಬವಾಗಿರುವ ಬಗ್ಗೆ ನ್ಯಾಯಾಲಯದ ಯಾವುದೇ ಅದೇಶ ಅಗಿರುವುದಿಲ್ಲ ಎಂದರೆ ಕೋವಿಡ್ –19 ಇರುವ ಕಾರಣ ಅಗಿಲ್ಲ. ಅಗಾಗಿ ನಿಮ್ಮ ಪಿರ್ಯಾದಿಯು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣ ದಾಖಲು ಮಾಡಲು 1 1/2 ತಿಂಗಳು ತಡವಾಗಿದೆ ಎಂದರೆ ಕೋವಿಡ್ ಕಾರಣದಿಂದ ತಡವಾಗಿರುತ್ತದೆ. ನಿಪಿ 1 ಚೆಕ್ ಅಮಾನ್ಯವಾಗುವ ಸಮಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಎಲ್ಲಾ ಬರವಣಿಗೆಗಳು ನಿಮ್ಮದಾಗಿರುತ್ತದೆ ಎಂದರೆ ಸರಿಯಲ್ಲ, ದಿನಾಂಕ 26.04.2021 ರಂದು ಅರೋಪಿಗೆ ನೀವು ಯಾವುದೇ ನೋಟಿಸ್ಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ, ದಿನಾಂಕ 17.04.2021 ರಲ್ಲಿ ಯಾವುದೇ ಬಾಂಕ್ ಮೇವೋ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಅರೋೀಪಿಗೆ ನೋಟಿಸ್ಸು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಜಾರಿಯಾಗಿರುವ ಬಗ್ಗೆ ಅಂಚೆ ಹಿಂಬರಹವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ಅರೋಪಿ ಹಾಗೂ ನಿಮ್ಮ ಮಧ್ಯ ಯಾವುದೇ ಹಣದ ವ್ಯವಹಾರ ಇಲ್ಲದ್ದರೂ 5 ಲಕ್ಷ ಹಣವನ್ನು ನಿಮ್ಮ ಗಂಡ ಪಡೆದುಕೊಂಡು ನೀವು ಸುಳ್ಳು ಪ್ರಕರಣ ಹಾಕಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/–**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**